

## ಸಲ್ಲೂಗೆ ಕಾಟ

'ನೂರು ಕೋಟಿ ಸಿನಿಮಾ'ಗಳ ಅನಭಿಷಿಕ್ತ ಹೀರೊ ಸಲ್ಮಾನ್ ಖಾನ್‌ನದ್ದು ಸದ್ಯಕ್ಕೆ ಯಾರೂ ಸರಿಗಟ್ಟಲಾಗದ ಜನಪ್ರಿಯತೆ ಎನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ. ಧಬಾಂಗ್-2 ಚಿತ್ರದ ಶೂಟಿಂಗ್‌ಅನ್ನು ಲಖನೌ ಮತ್ತು ಕಾನ್ಪುರಗಳಲ್ಲಿ ನಡೆಸುತ್ತಿರುವ ಚಿತ್ರತಂಡಕ್ಕೆ ಭಾರೀಸಂಖ್ಯೆ ಅಭಿಮಾನಿಗಳದ್ದೇ ಬಲುದೊಡ್ಡ ತಲೆನೋವಾಗಿದೆಯಂತೆ. ಎರಡೂ ನಗರಗಳ ಪೊಲೀಸರಂತೂ 'ದಯವಿಟ್ಟು ಸಲ್ಮಾನ್ ಖಾನ್‌ನನ್ನು ಇಲ್ಲಿ ಶೂಟಿಂಗ್‌ಗೆ ತರಿಸಬೇಡಿ. ಜನರನ್ನು ಕಂಟ್ರೋಲ್ ಮಾಡೋದು ನಮಗೆ ಸಾಧ್ಯವಿಲ್ಲ' ಎಂದಿದ್ದಾರಂತೆ! ಹಾಗಾಗಿ ಈ ಎರಡೂ ನಗರಗಳಲ್ಲಿ ನಡೆಯಲಿರುವ ಶೂಟಿಂಗ್‌ನಲ್ಲಿ ಸಲ್ಮಾನ್ ಖಾನ್ ಭಾಗವಹಿಸುತ್ತಿಲ್ಲ.

ಹಾಗೆಂದು ಚಿತ್ರತಂಡದವರು ಪದೇಪದೇ ಹೇಳಿಕೆ ಕೊಟ್ಟರೂ ಅಭಿಮಾನಿಗಳು ಮಾತ್ರ ನಂಬುತ್ತಿಲ್ಲ. ಕಳೆದ ವಾರ ಕಾನ್ಪುರದಲ್ಲಿ ಒಮ್ಮೆಂದೊಮ್ಮೆಲೆ ನೂರಾರು ಜನರು ಅಲ್ಲಿನ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದಾರೆ. 'ಠಾಣೆಯ ಒಳಗೆ ಶೂಟಿಂಗ್ ನಡೀತಿದೆ. ಸಲ್ಮಾನ್ ಖಾನ್ ಶೂಟಿಂಗಿನಲ್ಲಿದ್ದಾರೆ' ಎಂದು ಸುದ್ದಿ ಹಬ್ಬಿದ್ದೇ ಇದಕ್ಕೆ ಕಾರಣ. ಕೊನೆಗೆ ಪೊಲೀಸರು ಸ್ಪಷ್ಟನೆ ನೀಡಿ ಎಲ್ಲ ಜನರನ್ನೂ ಚದುರಿಸಿದರಂತೆ.

"ಕಾನ್ಪುರದಲ್ಲಿ ಶೂಟಿಂಗ್ ಮಾಡುವುದೇ ಕಷ್ಟವಾಗಿದೆ. ಕೆಲವು ಸ್ಥಳಗಳಲ್ಲಿ ಗೆರಿಲ್ಲಾ ಹೋರಾಟದ ಮಾದರಿಯಲ್ಲಿ ನಾವು ಗುಪ್ತ ಕ್ಯಾಮೆರಾ ಇಟ್ಟು ಶೂಟಿಂಗ್ ನಡೆಸಿದ್ದೇವೆ. ಸುದ್ದಿಯನ್ನು ಎಷ್ಟೇ ಗುಟ್ಟಾಗಿ ಇಟ್ಟರೂ ನಾವು ಶೂಟಿಂಗ್ ಸ್ಥಳಕೆ ತೆರಳುವ ಮುನ್ನವೇ ಅಲ್ಲಿ ಜನ ಸೇರುತ್ತಿದ್ದರು. ಸಾಕಾಗಿದೆ. ಬಿಹಾರ-ದಲ್ಲೂ ಇದೇ ಸ್ಥಿತಿ ಇದೆ' ಎಂದು ಚಿತ್ರದ ನಿರ್ದೇಶಕ ಅರ್ಬಾಝ್ ಖಾನ್ ತಲೆ ಚಚ್ಚಿಕೊಂಡಿದ್ದಾನೆ. 80ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ 47ರ ಹರೆಯದ ಸಲ್ಮಾನ್ ಇವತ್ತಿಗೂ ಯುವಜನರ ನೆಚ್ಚಿನ ತಾರೆಯಾಗಿರುವುದು ಅಚ್ಚರಿಯ ಸಂಗತಿಯೇ.

ಅಂದ ಹಾಗೆ ಸಲ್ಮಾನ್ ಖಾನ್, ಐಪಿಎಲ್ ಕ್ರಿಕೆಟ್ ತಂಡವನ್ನು ಖರೀದಿಸಲಿದ್ದಾರೆ ಎಂಬ ಗಾಳಿಸುದ್ದಿಗೆ ಇದೀಗ ತೆರೆ ಬಿದ್ದಿದೆ. 25 ದಶಲಕ್ಷ ಅಮೆರಿಕನ್ ಡಾಲರ್ ಆಸ್ತಿಯ ಒಡೆಯ ಸಲ್ಮಾನ್ ಖಾನ್ ಇತ್ತೀಚೆಗೆ ಟ್ವಿಟ್ಟರ್‌ನಲ್ಲಿ 'ನಾನು ಡೆಕ್ಕನ್ ಚಾರ್ಜರ್ಸ್ ತಂಡವನ್ನು ಖರೀದಿಸುತ್ತಿಲ್ಲ. ಐಪಿಎಲ್‌ನಲ್ಲಿ ಯಾವ ಪ್ರಚಾರದಲ್ಲೂ ಭಾಗವಹಿಸುತ್ತಿಲ್ಲ' ಎಂದು ಖಡಾಖಂಡಿತವಾಗಿ ಟ್ವೀಟ್ ಮಾಡಿದ್ದಾನೆ.

## ಸೋನಂ ಬಿಕಿನಿ

"ಸಾಮಾನ್ಯ ಹುಡುಗಿಯಂತೆ ಇರಬೇಕೆಂಬುದು ನನ್ನ ಆಸೆ. ಆದರೆ ಏನು ಮಾಡಲಿ.. ಎಲ್ಲಿ ಹೋದರೂ ಜನ ಮುತ್ತಿಗೆ ಹಾಕುತ್ತಾರೆ. ನನ್ನ ಕಾರಿನ ಕಿಟಕಿಯನ್ನು ಓಪನ್ ಮಾಡಿ ಸ್ವತಃ ಡ್ರೈವಿಂಗ್ ಮಾಡುತ್ತಾ ಓಡಾಡಬೇಕೆನ್ನುವುದು ನನ್ನ ಕನಸು. ಸಾಧ್ಯವೇ ಆಗುತ್ತಿಲ್ಲ" ಎಂದಿದ್ದಾಳೆ ಸೋನಂ ಕಪೂರ್.

ಬಾಲಿವುಡ್‌ನ ಬುದ್ಧಿವಂತ ಹೀರೋಯಿನ್ ಎಂದೇ ಹೆಸರು ಪಡೆದಿರುವ ಸೋನಂಗೆ ಓದುವುದು ಚಟ. ಸದ್ಯಕ್ಕೆ ಎಲಿಜಬೆತ್ ಟೇಲರ್‌ನ ಆತ್ಮಕಥೆಯನ್ನು ಓದುತ್ತಿದ್ದಾಳಂತೆ. "ಬಿಕಿನಿ ಹಾಕೋದರಲ್ಲಿ ತಪ್ಪೇನಿಲ್ಲ. ಸದ್ಯಕ್ಕೆ ನನ್ನ ದೇಹದ ಶೇಪ್ ಆಕರ್ಷಕವಾಗಿದೆ ಎಂದು ನನಗನ್ನಿಸುತ್ತಿಲ್ಲ. ಹಾಗಾಗಿ ನಾನು ಬಿಕಿನಿ ಹಾಕಿ ನಟಿಸುತ್ತಿಲ್ಲ. ಶೇಪಪ್ ಆದ ಮೇಲೆ ಬಿಕಿನಿ ಹಾಕಿಕೊಂಡು ಮುಂಬೈಯ ರಸ್ತೆಗಳಲ್ಲಿ ಒಮ್ಮೆ ತಿರುಗಾಡಬೇಕು ಎಂದುಕೊಂಡಿದ್ದೇನೆ" ಎಂದು ಈ ಶ್ವೇತಸುಂದರಿ ತುಂಟ ನಗೆ ನಕ್ಕಾಗಿ ಪತ್ರಕರ್ತರು ಬೇಸ್ತು ಬಿದ್ದರಂತೆ. ಆಕೆಯ ಹೇಳಿಕೆ ಗಂಭೀರವಾದದ್ದೋ, ತಮಾಷೆಯದ್ದೋ ಎಂದು ತಿಳಿದುಕೊಳ್ಳಲು ಅವರಿಗೆ ಆಗಲೇ ಇಲ್ಲವಂತೆ!

ಹಾಲಿವುಡ್‌ನ ಎಲ್ಲ ಸಿನಿಮಾಗಳನ್ನೂ ನೋಡುವ ಸೋನಂಗೆ ಲಿಯೊನಾರ್ಡೊ ಡಿ ಕಾಪ್ರಿಯೊ ಮತ್ತು ಆಡಂ ಲೆವಿನ್ ನಟನೆಯೆಂದರೆ ತುಂಬ ಇಷ್ಟವಂತೆ. ಅಂದ ಹಾಗೆ, ಏಂಜಲಿನಾ ಜೂಲಿಯ ಸೌಂದರ್ಯ ಕಂಡು ತುಂಬ ಮತ್ಸರವಂತೆ!

■ ಬಿಂದು

